# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **649(875)** |
| **ಸದಸ್ಯರ ಹೆಸರು** | : | ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 26.12.2022 |
| **ಉತ್ತರಿಸುವ ಸಚಿವರು** | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರ.ದ.ಸ/ದ್ವಿ.ದ.ಸ. ನೌಕರರ ಕಾರ್ಯಕ್ಷಮತೆ ವಿಷಯ ಪರಿಣಿತಿಯ ಪರೀಕ್ಷೆ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಬೇರೆ ವೃಂದದ ನೌಕರರಿಗೆ ಇಲ್ಲದ ಪರೀಕ್ಷೆಗಳು ಸದರಿ ನೌಕರರಿಗೆ ಮಾತ್ರ ಇರಲು ಕಾರಣವೇನು ; | ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸೀಮಿತವಾಗಿ ವಿಷಯ ನಿರ್ವಾಹಕರುಗಳಿಗೆ ಹಾಗೂ ಹೊಸದಾಗಿ ನೇಮಕಗೊಂಡ ನೌಕರರುಗಳಿಗೆ ಇಲಾಖೆಯ ನಿಯಮಗಳ ಕುರಿತು ಅಗತ್ಯ ಜ್ಞಾನವನ್ನು ಹೊಂದಲು ಹಾಗೂ ಆಡಳಿತ ಯಂತ್ರದ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಇಂತಹ ಪರೀಕ್ಷಯು ಅಗತ್ಯತೆಯನ್ನು ಮನಗಂಡು ಆಯಾ ಡಯಟ್ ವತಿಯಿಂದ ತರಬೇತಿ ಮತ್ತು ಪರೀಕ್ಷೆ ಹಮ್ಮಿಕೊಳ್ಳಲಾಗುತ್ತಿದೆ. |
| ಆ) | ಸದರಿ ನೌಕರರರಿಗೆ ಶೇಕಡಾ 60 ಅಂಕಗಳನ್ನು ಕಡ್ಡಾಯವಾಗಿ ಪಡೆಯ ಬೇಕೆಂಬ ಆದೇಶವು ಸಮಂಜಸವೇ ; | ಈಗಾಗಲೇ ಎಲ್ಲ ವಿಷಯ ನಿರ್ವಾಹಕರುಗಳಿಗೆ ಆಡಳಿತಾತ್ಮಕ ವಿಷಯಗಳ ನಿರ್ವಹಣೆಗೆ ಸಂಬಂಧಿಸಿದಂತೆ, ಆಯಾ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳು/ವಿಷಯ ತಜ್ಞರಿಂದ ಡಯಟ್ ವತಿಯಿಂದ ತರಬೇತಿ ನೀಡಲಾಗಿರುತ್ತದೆ. ತರಬೇತಿ ಪಡೆದ ನೌಕರರುಗಳು ಹೊಂದಿರುವ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣಿತಿ ಬಗ್ಗೆ ಪರೀಕ್ಷೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಒಂದು ವೇಳೆ ಕಡಿಮೆ ಅಂಕ ಪಡೆದ ನೌಕರರಿಗೆ ತರಬೇತಿ ಅಗತ್ಯವಿರುವುದನ್ನು ಮನಗಂಡು ಪುನಃ ತರಬೇತಿಗಳಿಗೆ ನಿಯೋಜಿಸಿ ನೌಕರರುಗಳ ಕಾರ್ಯ ಕ್ಷಮತೆ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಇದರಿಂದಾಗಿ ಕಛೇರಿಯ ದೈನಂದಿನ ಕೆಲಸಕಾರ್ಯಗಳು ಸುಗಮವಾಗಿ ಮತ್ತು ಸಾರ್ವಜನಿಕರಿಗೆ ಮತ್ತು ಶಿಕ್ಷಕರುಗಳಿಗೆ ಇಲಾಖೆಯಿಂದ ದೊರೆಯುವ ಸವಲತ್ತುಗಳನ್ನು ಶೀಘ್ರವಾಗಿ ದೊರಕಿಸುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ. |
| ಇ) | ನಿವೃತ್ತಿ ಅಂಚಿನಲ್ಲಿರುವ ನೌಕರರಿಗೆ ಮಾನಸಿಕ ತೊಂದರೆಯಾಗುತ್ತದೆ ಎಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ನಿವೃತ್ತಿ ಅಂಚಿನಲ್ಲಿರುವ ನೌಕರರಿಗೆ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣಿತಿ ಪರೀಕ್ಷೆಯಿಂದ ತೊಂದರೆ ಯಾಗಿರುವುದಿಲ್ಲ. |

**ಸಂಖ್ಯೆ: ಇಡಿ 119 ಎಸ್‌ಟಿಬಿ 2022**

(ಬಿ.ಸಿ. ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು